ವಿಶ್ವವಾಣಿ

ಬೆಂಗಳೂರು
vishwavani.news
14.08.2019 ಬುಧವಾರ

ಸಮಾಚಾರ ಸಣ್ಣದಲ್ಲ

ಗುಜರಾತ್‌ನಲ್ಲಿ ಕಟ್ಟಡ ಕುಸಿತ

ಆನಂದ್: ಗುಜರಾತಿನ ಆನಂದ್ ಜಿಲ್ಲೆಯ ಖಂಭಟ್ ಪಟ್ಟಣದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಸೋಮವಾರ ತಡರಾತ್ರಿ ಮೂರು ಅಂತಸ್ತಿನ ಕಟ್ಟಡ ಕುಸಿದುಬಿದ್ದಿದೆ. ಇದರಿಂದ ಯಾವುದೇ ಪ್ರಾಣಹಾನಿಯಾಗಿಲ್ಲವಾದರೂ ಅಕ್ಕಪಕ್ಕದ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ತಿಳಿದುಬಂದಿದೆ. ಝುಂಡಾ ಚೌಕ್ ಪ್ರದೇಶದ ಸಮೀಪವಿದ್ದ ಈ ಹಳೆಯ ಕಟ್ಟಡದಲ್ಲಿ ಹಿಂದೆ ಸಾರ್ವಜನಿಕ ವಲಯದ ಬ್ಯಾಂಕ್ ಇತ್ತು ಎನ್ನಲಾಗಿದೆ. ರಾಜ್ಯದಲ್ಲಿ ಭಾರಿ ಮಳೆಯಿಂದ ಮನೆ ಮತ್ತು ಕಟ್ಟಡ ಕುಸಿದ ಕಾರಣದಿಂದಾಗಿ ಈವರೆಗೆ 26 ಮಂದಿ ಸಾವನ್ನಪ್ಪಿದ್ದಾರೆ ಎಂದು ಸುದ್ದಿಮೂಲಗಳು ತಿಳಿಸಿವೆ.

ವೇಗದೂತ ರೈಲು

ದೆಹಲಿ: ಗಂಟೆಗೆ 180 ಕಿ.ಮೀ. ವೇಗದಲ್ಲಿ ಚಲಿಸಬಲ್ಲ ರೈಲು ಎಂಜಿನ್‌ಗಳನ್ನು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದಡಿ ಪಶ್ಚಿಮ ಬಂಗಾಳದ ಚಿತ್ತರಂಜನ್ ಲೋಕೊ ಮೋಟಿವ್ ವರ್ಕ್ಸ್ (ಸಿಎಲ್‌ಡಬ್ಲ್ಯು) ಎಂಜಿನ್ ಉತ್ಪಾದನಾ ಘಟಕದಲ್ಲಿ ತಯಾರಿಸಲಾಗಿದೆ ಎಂದು ರೈಲ್ವೆ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಸದರಿ ಎಂಜಿನ್ನುಗಳ ವಿನ್ಯಾಸ, ಪ್ರತ್ಯನುಕರಣೆ, ಅಭಿವೃದ್ಧಿ ಹಾಗೂ ಉತ್ಪಾದನೆಯ ಹೊಣೆಯನ್ನು ಸಿಎಲ್‌ಡಬ್ಲ್ಯುಗೆ ಹೊರಿಸಲಾಗಿತ್ತು. ಎಂಜಿನ್ ವೇಗ ಹೆಚ್ಚಿಸಲೆಂದು ತೂಕದಲ್ಲಿ ಸುಮಾರು 14 ಟನ್ನುಗಳಷ್ಟು ಕಡಿಮೆ ಮಾಡಲಾಗಿದೆ ಹಾಗೂ ಪರೀಕ್ಷಾ ಪ್ರಯೋಗದಲ್ಲಿ ಸದರಿ ಎಂಜಿನ್ನು ಗಂಟೆಗೆ 180 ಕಿ.ಮೀ. ವೇಗದಲ್ಲಿ ಓಡುವುದು ಸಾಬೀತಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ಈ ವೇಳೆ ತಿಳಿಸಿದ್ದಾರೆ.

MAKE IN INDIA

ಯಾತ್ರೆ ಅಬಾಧಿತ

ಜಮ್ಮು: ಮಾತಾ ವೈಷ್ಣೋದೇವಿ ಯಾತ್ರೆ ಸುಗಮವಾಗಿ ಸಾಗಿದ್ದು, ಯಾತ್ರಿಕರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದೆಂದು ದೇವಾಲಯದ ಆಡಳಿತ ಮಂಡಳಿ ಮಂಗಳವಾರ ಮನವಿ ಮಾಡಿದೆ. ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿ ರದ್ದಾದ ಬಳಿಕ ಪರಿಸ್ಥಿತಿ ಶಾಂತವಾಗಿದೆ. ಜಿಲ್ಲಾಡಳಿತ ಹೇರಿದ್ದ ಕೆಲವು ನಿರ್ಬಂಧಗಳನ್ನೂ ಹಿಂತೆಗೆದುಕೊಳ್ಳಲಾಗಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದೆ ಯಾತ್ರೆ ಸುಸೂತ್ರವಾಗಿದೆ ಎಂದು ಮಂಡಳಿ ಟ್ವಿಟರ್‌ನಲ್ಲಿ ಖಾತ್ರಿಪಡಿಸಿದೆ.

ಸಿಬಿಎಸ್‌ಇ ಶುಲ್ಕ ಹೆಚ್ಚಳ ಮಾಯಾವತಿ ಟೀಕೆ

ಲಖನೌ: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಪರೀಕ್ಷಾ ಶುಲ್ಕದಲ್ಲಿ ತೀವ್ರ ಹೆಚ್ಚಳ ಮಾಡಿರುವುದನ್ನು ಟೀಕಿಸಿರುವ ಬಹುಜನ ಸಮಾಜ ಪಕ್ಷದ ಅಧ್ಯಕ್ಷೆ ಮಾಯಾವತಿ, ಇದು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಬಡವರ-ವಿರೋಧಿ ಕೃತ್ಯ ಎಂದು ದೂರಿದ್ದಾರೆ. ಈ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಮಾಯಾವತಿ, ಸರಕಾರದ ಈ ಕ್ರಮ ಶಿಕ್ಷಣ ವ್ಯವಸ್ಥೆಯ ಹಳಿತಪ್ಪಿಸುವಂತಿದ್ದು, ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವುದನ್ನು ತಡೆಯುವಂತಿದೆ. ಮಕ್ಕಳಾಟದಂತಿರುವ ಈ ನಿರ್ಧಾರದ ವಿರುದ್ಧ ವಿದ್ಯಾರ್ಥಿಗಳು ಕೈಗೊಳ್ಳುವ ಯಾವುದೇ ಹೋರಾಟದ ಪರವಾಗಿ ತಮ್ಮ ಪಕ್ಷ ನಿಲ್ಲಲಿದೆ ಎಂದಿದ್ದಾರೆ.

ಸಿಬಿಎಸ್‌ಇ ಕೈಗೊಂಡ ಪರಿಷ್ಕರಣೆಗಳ ಅನ್ವಯ, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವು 50 ರು.ನಿಂದ 1,200 ರು.ಗೆ, ಸಾಮಾನ್ಯವರ್ಗದ ವಿದ್ಯಾರ್ಥಿಗಳ ಶುಲ್ಕವು 750 ರು.ನಿಂದ 1,500 ರು.ಗೆ ಹೆಚ್ಚಳಗೊಂಡಿರುವುದರ ಜತೆಗೆ, ವಿದೇಶಗಳಲ್ಲಿನ ಸಿಬಿಎಸ್‌ಇ ಶಾಲೆಗಳಲ್ಲಿನ ವಿದ್ಯಾರ್ಥಿಗಳು 10 ಮತ್ತು 12ನೇ ತರಗತಿಯ ಪರೀಕ್ಷೆಗೆ 5 ಸಾವಿರ ರು. ಬದಲಿಗೆ 10 ಸಾವಿರ ರು. ಪಾವತಿಸಬೇಕಾಗಿದೆ. ಈ ಮೊದಲು 150 ರು. ಇದ್ದ ವಲಸೆ ಪತ್ರದ ಶುಲ್ಕವನ್ನು 350 ರು.ಗೆ ಹೆಚ್ಚಿಸಲಾಗಿದೆ ಎಂಬುದನ್ನಿಲ್ಲಿ ಸ್ಮರಿಸಬಹುದು.

ವಿಮಾನದಲ್ಲಿ ಹೊಗೆ ತುರ್ತು ಭೂಸ್ಪರ್ಶ

ನಾಗಪುರ: ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ಹೊಗೆ ಕಾಣಿಸಿಕೊಂಡ ಪರಿಣಾಮ ಅದು ತಕ್ಷಣ ಭೂಸ್ಪರ್ಶ ಮಾಡಬೇಕಾಗಿ ಬಂತು. ಇಲ್ಲಿಂದ ದೆಹಲಿಗೆ ಹಾರಬೇಕಿದ್ದ ವಿಮಾನದಲ್ಲಿ ಗಡ್ಕರಿ ಸೇರಿದಂತೆ ಅನೇಕ ಪ್ರಯಾಣಿಕರಿದ್ದರು ಎಂದು ತಿಳಿದುಬಂದಿದೆ. ಹೊಗೆ ಕಾಣಿಸಿ ಅಸಹಜ ಶಬ್ದ ಕೇಳಿಸಿದ ನಂತರ ವಿಮಾನವನ್ನು ರನ್‌ವೇಯಿಂದ ಟ್ಯಾಕ್ಸಿವೇಗೆ ತೆಗೆದುಕೊಂಡು ಹೋಗಲಾಯಿತು ಎನ್ನಲಾಗಿದೆ.

ದಶಕಗಳ ಹಿಂದೆ ನಡೆದಿದ್ದ ರೋಮಾಂಚಕ ಸಾಹಸ ಕಾರ್ಯದ ಪುನರಾವರ್ತನೆ ಆಗಲಿದೆಯೇ?

ಸ್ವಾತಂತ್ರ್ಯದಿನ ಶ್ರೀನಗರದಲ್ಲಿ ಅಮಿತ್ ಶಾ ಧ್ವಜಾರೋಹಣ..?

ದೆಹಲಿ: ಮತ್ತೊಂದು ಐತಿಹಾಸಿಕ ಕ್ಷಣಕ್ಕೆ ಜಮ್ಮು-ಕಾಶ್ಮೀರ ಸಾಕ್ಷಿಯಾಗಬಹುದು ಎನ್ನಲಾಗುತ್ತಿದೆ. ಆಗಸ್ಟ್ 15ರ ಸ್ವಾತಂತ್ರ್ಯ ದಿನದಂದು ಶ್ರೀನಗರದ ಲಾಲ್‌ಚೌಕ್ ಪ್ರದೇಶದಲ್ಲಿ ತ್ರಿ ವರ್ಣ ಧ್ವಜ ಹಾರಿಸಲೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಕಣಿವೆರಾಜ್ಯಕ್ಕೆ ತೆರಳಬಹುದು ಎಂಬ ವರದಿಗಳಿವೆ. ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದ ನಂತರದ ಶಾ ಅವರ ಈ ಬಹುನಿರೀಕ್ಷಿತ ಭೇಟಿಯ ಕುರಿತು ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿಗಳು ಇನ್ನೂ ದೃಢಪಡಿಸಿಲ್ಲವಾದರೂ, ಭಾರಿ ಭದ್ರತಾ ಕ್ರಮಗಳನ್ನು ಈಗಾಗಲೇ ಕೈಗೊಂಡಿರುವುದು ಈ ಗ್ರಹಿಕೆಗೆ ಪುಷ್ಟಿನೀಡುವಂತಿದೆ.

ಈಗಾಗಲೇ ಕಾಶ್ಮೀರ ಕಣಿವೆಯಲ್ಲಿ ಮೊಕ್ಕಾಂ ಹೂಡಿ ಅಲ್ಲಿನ ಪರಿಸ್ಥಿತಿಯ ಅವಲೋಕನ ಮತ್ತು ನಿಯಂತ್ರಣದಲ್ಲಿ ವ್ಯಸ್ತರಾಗಿರುವ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಕೂಡ ಧ್ವಜಾರೋಹಣದ ಸಂದರ್ಭದಲ್ಲಿ ಹಾಜರಿರಬಹುದು ಎನ್ನಲಾಗುತ್ತಿದೆ.

ಅಮಿತ್ ಶಾ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಪಾಲಿಗೆ, ಶ್ರೀನಗರದ ಲಾಲ್‌ಚೌಕದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವುದು ಒಂದು ಮಧುರಸ್ಮೃತಿಯ ಕ್ಷಣ. ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳಿಂದ ತೀವ್ರ ಬೆದರಿಕೆಯಿದ್ದುದರ ಹೊರತಾಗಿಯೂ, 1992ರಲ್ಲಿ ಬಿಜೆಪಿಯ ಹಿರಿಯನಾಯಕ ಮುರಳಿ ಮನೋಹರ ಜೋಷಿ ಹಾಗೂ ಮೋದಿಯವರ ಜೋಡಿ ಅಲ್ಲಿ ಧ್ವಜಾರೋಹಣ ಮಾಡಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

textile
SALE
KAPOO
BKU

ನಿರ್ದೇಶನಕ್ಕೆ ಸುಪ್ರೀಂ ನಿರಾಕರಣೆ

ದೆಹಲಿ: ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿರದ್ದತಿಯ ನಂತರ ಕಣಿವೆ ಪ್ರದೇಶದಲ್ಲಿ ವಿಧಿಸಲಾಗಿರುವ ನಿರ್ಬಂಧಗಳನ್ನು ತೆರವುಗೊಳಿಸುವಂತೆ ಕೇಂದ್ರ ಸರಕಾರಕ್ಕೆ ಯಾವುದೇ ತುರ್ತು ಆದೇಶ ನೀಡಲು ಮಂಗಳವಾರ ನಿರಾಕರಿಸಿರುವ ಸರ್ವೋಚ್ಚ ನ್ಯಾಯಾಲಯ, ಜಮ್ಮು-ಕಾಶ್ಮೀರದಲ್ಲಿನ ಪರಿಸ್ಥಿತಿ ತೀರಾ ಸೂಕ್ಷ್ಮವಾಗಿದ್ದು ಅಲ್ಲಿ ಸಾಮಾನ್ಯ ಸ್ಥಿತಿಯನ್ನು ಖಾತ್ರಿಪಡಿಸಲು ಸರಕಾರಕ್ಕೆ ಸಾಕಷ್ಟು ಕಾಲಾವಕಾಶ ನೀಡಬೇಕಾಗುತ್ತದೆ ಎಂದಿದೆ.

370ನೇ ವಿಧಿ ರದ್ದತಿಯನ್ನನು ಸರಿಸಿ ಜಮ್ಮು-ಕಾಶ್ಮೀರದಲ್ಲಿ ನಿರ್ಬಂಧಗಳು ಮತ್ತು ಕೈಗೊಳ್ಳಲಾದ ಮತ್ತಿತರ ಪ್ರತಿಗಾಮಿ ಕ್ರಮಗಳನ್ನು ಹೇರುವ ಕೇಂದ್ರ ಸರಕಾರದ ನಿರ್ಣಯದ ಕುರಿತಾಗಿ ಕಾಂಗ್ರೆಸ್ ಕಾರ್ಯಕರ್ತ ತೆಹಸೀನ್ ಪೂನಾವಾಲಾ ಅವರು ಸಲ್ಲಿಸಿರುವ ಅಹವಾಲಿನ ವಿಚಾರಣೆ ನಡೆಸಿದ ನ್ಯಾ. ಅರುಣ್ ಮಿಶ್ರಾ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಟ್ರಂಪ್ ಮಧ್ಯಸ್ಥಿಕೆಯಿಲ್ಲ : ರಾಯಭಾರಿ ಸ್ಪಷ್ಟನೆ

ವಾಷಿಂಗ್ಟನ್: ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದಾಗಿ ಹಿಂದೆ ತಾವು ಮಾಡಿದ್ದ ಪ್ರಸ್ತಾವ ಇನ್ನು ಮುಂದೆ ಪರಿಗಣನೆಯಲ್ಲಿರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ ಎಂದು ಅಮೆರಿಕದಲ್ಲಿನ ಭಾರತ ರಾಯಭಾರಿ ಹರ್ಷವರ್ಧನ್ ಶಿಂಗ್ಲಾ ಸೋಮವಾರ ತಿಳಿಸಿದ್ದಾರೆ.

ಈ ಕುರಿತು ಹರ್ಷವರ್ಧನ್ ಮಾತನಾಡುತ್ತ, 'ಜಮ್ಮು-ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವ ತಮ್ಮ ಪ್ರಸ್ತಾವವು, ಭಾರತ ಮತ್ತು ಪಾಕಿಸ್ತಾನ ಅದನ್ನು ಒಪ್ಪುವುದರ ಮೇಲೆ ಅವಲಂಬಿತವಾಗಿದೆ. ಆದರೆ ಪ್ರಸ್ತಾವಕ್ಕೆ ಭಾರತದ ಸಹಮತ ಇಲ್ಲದಿರುವ ಕಾರಣ, ಆ ವಿಷಯವನ್ನು ಇನ್ನು ಪರಿಗಣಿಸುವುದಿಲ್ಲ; ಭಾರತ-ಪಾಕಿಸ್ತಾನ ತಮ್ಮ ಭಿನ್ನಾಭಿಪ್ರಾಯಗಳನ್ನು ದ್ವಿಪಕ್ಷೀಯ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಲಿ ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ' ಎಂದಿದ್ದಾರೆ. ಜುಲೈ 22ರಂದು, ಅಮೆರಿಕದ ಶ್ವೇತಭವನದಲ್ಲಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಜತೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ, ಕಾಶ್ಮೀರ ವಿವಾದದ ಕುರಿತಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ತಮ್ಮ ಮಧ್ಯಸ್ಥಿಕೆ/ಪಂಚಾಯಿತಿಯನ್ನು ಕೋರಿದ್ದಾರೆ ಎನ್ನುವ ಮೂಲಕ ಅಮೆರಿಕ ಅಧ್ಯಕ್ಷ ಟ್ರಂಪ್ ಭಾರತಕ್ಕೆ ದಿಗ್ಭ್ರಮೆ ಉಂಟುಮಾಡಿದ್ದರು. ಟ್ರಂಪ್‌ರನ್ನು ಭಾರತ ಹೀಗೆ ಕೋರಿಲ್ಲ, ಎಲ್ಲ ವಿವಾದಗಳನ್ನು ಪಾಕ್ ಜತೆ ಚರ್ಚಿಸಿ ಬಗೆಹರಿಸಿಕೊಳ್ಳಲಾಗುವುದು ಎಂದು ಭಾರತ ತರುವಾಯದಲ್ಲಿ ಸಮರ್ಥಿಸಿಕೊಂಡಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

ಭದ್ರತಾ ಮಂಡಳಿಯ ಬೆಂಬಲದ ಭ್ರಮೆ ಬೇಡ

ದೆಹಲಿ: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿಯನ್ನು ರದ್ದುಮಾಡುವ ಭಾರತದ ನಿರ್ಧಾರಕ್ಕೆ ಪಾಕಿಸ್ತಾನ ಒಡ್ಡಿರುವ ಆಕ್ಷೇಪಗಳನ್ನು ಬೆಂಬಲಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಹಾರ ಹಿಡಿದುಕೊಂಡು ಕಾಯುತ್ತದೆ ಎಂದು ನಿರೀಕ್ಷಿಸುವುದಾಗಲೀ ಅಂಥ ಭ್ರಮೆಯಿಟ್ಟುಕೊಳ್ಳುವುದಾಗಲೀ ಬೇಡ ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಪಾಕ್ ಪ್ರಜೆಗಳಿಗೆ ಕರೆನೀಡಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಮಜಫ್ಫರಾಬಾದ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, 'ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಕಾಯಂ ಸದಸ್ಯರ (ಚೀನಾ, ಫ್ರಾನ್ಸ್, ರಷ್ಯಾ, ಅಮೆರಿಕಾ ಮತ್ತು ಬ್ರಿಟನ್) ಪೈಕಿ ಯಾವುದೇ ರಾಷ್ಟ್ರವು ಬಹುಜನರ ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡು ಅದನ್ನು ಹಾಳುಗೆಡವಬಹುದು. ಹೀಗಾಗಿ, ಸದರಿ ಚರ್ಚಾವಿಷಯವು ಭದ್ರತಾ ಮಂಡಳಿವರೆಗೆ ಮುಟ್ಟಿದೆಯೆಂದ ಮಾತ್ರಕ್ಕೆ ಅದು ಪಾಕಿಸ್ತಾನಕ್ಕೆ ಅನುಕೂಲವಾಗುವಂತೆ ತಿರುವು ಪಡೆಯುತ್ತದೆ ಎನ್ನಲಾಗದು' ಎಂದರು.

ಸ್ವಾತಂತ್ರ್ಯ ಬೇಕು, ವಿಮಾನವಲ್ಲ

ದೆಹಲಿ: ಕಾಶ್ಮೀರಕ್ಕೆ ಭೇಟಿಯಿತ್ತು ವಾಸ್ತವಿಕ ಪರಿಸ್ಥಿತಿ ಅವಲೋಕಿಸುವುದಕ್ಕೆ ವಿಮಾನ ಕಳಿಸಲಾಗುವುದೆಂಬ ಜಮ್ಮು-ಕಾಶ್ಮೀರ ರಾಜ್ಯಪಾಲ ಸತ್ಯಪಾಲ್ ಮಲಿಕ್‌ರ ಆಹ್ವಾನ ಸ್ವೀಕರಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ನನಗೆ ವಿಮಾನದ ಅಗತ್ಯವಿಲ್ಲ; ಬದಲಿಗೆ ಕಾಶ್ಮೀರದಲ್ಲಿ ಮುಕ್ತವಾಗಿ ಸಂಚರಿಸಿ ಜನರು, ನಾಯಕರು ಮತ್ತು ಯೋಧರನ್ನು ಭೇಟಿಮಾಡುವ ಸ್ವಾತಂತ್ರ್ಯ ಸಿಕ್ಕರೆ ಸಾಕು' ಎಂದು ಮಂಗಳವಾರ ಟ್ವಿಟರ್ ಮಾಧ್ಯಮದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂಸಾಚಾರವಾಗುತ್ತಿರುವ ವರದಿಗಳು ಬಂದಿವೆ ಎಂಬ ರಾಹುಲ್ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿದ್ದ ಸತ್ಯಪಾಲ ಮಲಿಕ್ ಹೀಗೆ ಪ್ರಸ್ತಾವಿಸಿದ್ದರ ಜತೆಗೆ, 'ಓರ್ವ ಜವಾಬ್ದಾರಿಯುತ ವ್ಯಕ್ತಿಯಾಗಿರುವ ನೀವು ಹೀಗೆಲ್ಲ ಮಾತಾಡಬಾರದಿತ್ತು' ಎಂದು ತಿರುಗೇಟು ನೀಡಿದ್ದರು.

ಬಬಿತಾ ಫೋಗಟ್ ಬಿಜೆಪಿಗೆ ಸೇರ್ಪಡೆ

ನವದೆಹಲಿ: ಅಂತಾರಾಷ್ಟ್ರೀಯ ಖ್ಯಾತಿಯ ಕುಸ್ತಿಪಟು ಬಬಿತಾ ಫೋಗಟ್ ಹಾಗೂ ಅವರ ತಂದೆ, ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಮಹಾವೀರ ಫೋಗಟ್ ಅವರು ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ. ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಪಕ್ಷದ ಕಾರ್ಯಾಧ್ಯಕ್ಷ ಜೆಪಿ ನಡ್ಡಾ ಸಮ್ಮುಖದಲ್ಲಿ ದೆಹಲಿಯ ಬಿಜೆಪಿ ಮುಖ್ಯಕಚೇರಿಯಲ್ಲಿ ಈ ಇಬ್ಬರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಬಬಿತಾ ಫೋಗಟ್ ಅವರ ಯಶಸ್ಸಿನಿಂದ ಪ್ರೇರಣೆಗೊಂಡು 'ದಂಗಲ್' ಚಿತ್ರವನ್ನು ನಿರ್ಮಿಸಲಾಗಿದೆ. ಆದರೆ ಇವರ ಬಿಜೆಪಿ ಸೇರಿದ್ದರಿಂದ ಹರಿಯಾಣದ ಜನನಾಯಕ್ ಜನತಾ ಪಾರ್ಟಿಗೆ (ಜೆಜೆಪಿ) ಭಾರಿ ಹಿನ್ನಡೆ ಆಗಿದೆ. ಏಕೆಂದರೆ ಕಳೆದ ವರ್ಷ ಐಎನ್‌ಎಲ್‌ಡಿ ಇಬ್ಭಾಗವಾಗಿ ದುಷ್ಯಂತ್ ಚೌಟಾಲಾ ನೇತೃತ್ವದ ಜೆಜೆಪಿ ಅಸ್ತಿತ್ವಕ್ಕೆ ಬಂದಾಗ ತಂದೆ ಹಾಗೂ ಮಗಳು ಆ ಪಕ್ಷದೊಂದಿಗೆ ಕೆಲಸ ಮಾಡಿದ್ದರು. ಮಹಾವೀರ್ ಅವರು ಪಕ್ಷದ ಕ್ರೀಡಾ ವಿಭಾಗದ ಮುಖ್ಯಸ್ಥರೂ ಆಗಿದ್ದರು. ಆದರೆ ಇತ್ತೀಚೆಗೆ ಅವರ ಒಲವು ಬಿಜೆಪಿಯತ್ತ ತಿರುಗಿತ್ತು.

ರಾಜಕೀಯದಲ್ಲಿರುವ ಕ್ರೀಡಾಪಟುಗಳು

ಗೌತಮ್ ಗಂಭೀರ್– ಬಿಜೆಪಿ
ವಿಜೇಂದ್ರ ಸಿಂಗ್ –ಕಾಂಗ್ರೆಸ್
ದೀಪಾ ಮಲ್ಲಿಕ್–ಬಿಜೆಪಿ
ಕೃಷ್ಣಾ ಪೂನಿಯಾ–ಕಾಂಗ್ರೆಸ್
ರಾಜ್ಯವರ್ಧನ್‌ಸಿಂಗ್ ರಾಠೋಡ್–ಬಿಜೆಪಿ
ನವಜ್ಯೋತ್ ಸಿಂಗ್ ಸಿಧು–ಬಿಜೆಪಿ, ಕಾಂಗ್ರೆಸ್
ಕೀರ್ತಿ ಆಜಾದ್–ಬಿಜೆಪಿ, ಕಾಂಗ್ರೆಸ್
ಚೇತನ್ ಚೌಹಾನ್–ಬಿಜೆಪಿ
ಬೈಚುಂಗ್ ಭುಟಿಯಾ–ಟಿಎಂಸಿ, ಹಮಾರೊ ಸಿಕ್ಕಿಂ
ಮೊಹಮ್ಮದ್ ಕೈಫ್–ಕಾಂಗ್ರೆಸ್
ದಿಲೀಪ್ ಟಿರ್ಕೆ–ಬಿಜೆಡಿ
ಜ್ಯೋತಿರ್ಮಯಿ ಸಿಕ್ದರ್–ಸಿಪಿಐ
ಪ್ರಸೂನ್ ಬ್ಯಾನರ್ಜಿ–ಟಿಎಂಸಿ
ಪರ್ಗತ್ ಸಿಂಗ್–ಅಕಾಲಿದಳ, ಕಾಂಗ್ರೆಸ್
ಲಕ್ಷ್ಮೀ ರತನ್ ಶುಕ್ಲಾ–ಟಿಎಂಸಿ

ಜಿಯೋ ಗ್ರಾಹಕರಿಗೆ ಸಿಗಲಿದೆ ಭರ್ಜರಿ ಗಿಫ್ಟ್

ಮುಂಬೈ : ಬಹು ನೀರಿಕ್ಷಿತ ಜಿಯೋ ಫೈಬರ್ ವಾಣಿಜ್ಯ ಸೇವೆಗೆ ಸೆ.5ರಿಂದ ಚಾಲನೆ ದೊರೆಯಲಿದ್ದು, ದೇಶದ ಎಲ್ಲ ಭಾಗಗಳಲ್ಲಿ ಜನತೆಗೆ ಅಂದಿನಿಂದಲೇ ಸೇವೆ ಲಭ್ಯವಾಗಲಿವೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಖೇಶ್ ಅಂಬಾನಿ ತಿಳಿಸಿದ್ದಾರೆ.

ಸೋಮವಾರ ಮುಂಬೈನಲ್ಲಿ ನಡೆದ 42ನೇ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಲಭ್ಯವಿರುವ ಸೇವೆಗಳ ದರವು ಅಂದೇ ಪ್ರಕಟವಾಗಲಿದೆ. ಈ ಸೇವೆ ಬಳಕೆದಾರರಿಗೆ ಹೆಚ್ಚುವರಿ ಸೌಲಭ್ಯಗಳ ಜಿಯೋ ಪೋಸ್ಟ್ ಪೇಯ್ಡ್, ಮೊಬೈಲ್ ಸೇವೆಗಳನ್ನು ಪರಿಚಯಿಸಲಾಗುತ್ತಿದೆ. ಆರಂಭಿಕ ಕೊಡುಗೆಯಡಿ, ಜಿಯೋ ಫಾರೆವರ್ ವಾರ್ಷಿಕ ಪ್ಲಾನ್ ಆಯ್ಕೆ ಮಾಡಿಕೊಂಡ ಗ್ರಾಹಕರಿಗೆ ಎಚ್‌ಡಿ ಅಥವಾ 4ಕೆ ಎಲ್‌ಇಡಿ ಟಿವಿ ಹಾಗೂ ಸೆಟ್ ಆಫ್ ಬಾಕ್ಸ್ ಅನ್ನು ಉಚಿತವಾಗಿ ವಿತರಿಸಲಾಗುವುದಾಗಿ ವಿವರಿಸಿದರು.

ಈ ಜಿಯೋ ಫೈಬರ್ ಸೇವೆಯಿಂದಾಗಿ ಸಿನಿಮಾಗಳನ್ನು ಮೊದಲ ದಿನದ ಮೊದಲ ಶೋ ಮನೆಯಲ್ಲಿ ಕುಳಿತು ಟಿವಿಯಲ್ಲಿ ಅತಿ ಕಡಿಮೆ ಬೆಲೆಯಲ್ಲಿ ಕುಟುಂಬ ಸಮೇತರಾಗಿ ವೀಕ್ಷಿಸುವ ಬ್ರಾಡ್‌ಬ್ಯಾಂಡ್, ಉಚಿತ ಕರೆಗಳ ಸ್ಥಿರ ದೂರವಾಣಿ ಸೇರಿ ಹಲವು ಆಕರ್ಷಕ ರಿಲಯನ್ಸ್ ಫೈಬರ್ ಸೇವೆಗಳನ್ನು ಸೆಪ್ಟೆಂಬರ್ 5ರಿಂದ ನೀಡಲಿದೆ. ಫೈಬರ್ ಟು ದ ಹೋಂ ಸೇವೆಯಡಿ ಕನಿಷ್ಠ 100 ಎಂಬಿಪಿಎಸ್ ಗರಿಷ್ಠ ರು.10 ಸಾವಿರವರೆಗಿನ ಆಕರ್ಷಕ ಸೌಲಭ್ಯಗಳಿವೆ. ಡಿಜಿಟಲ್ ಸಾಧನಗಳು ಪರಸ್ಪರ ಇಂಟರ್‌ನೆಟ್ ಆಫ್ ಥಿಂಗ್ಸ್ ಮತ್ತು ಜೀಯೋ ಹೋಂ ಟಿವಿ ಸೇವೆ ಪರಿಚಯಿಲಾಗುತ್ತಿದೆ. ಎಚ್‌ಡಿ ಟಿವಿಯಲ್ಲಿ ವಿಶಿಷ್ಟ ವಾದ ಮನರಂಜನೆ ಅನುಭವ ನೀಡುವ ಕಾರ್ಯಕ್ರಮ, ಧ್ವನಿ ಆಧಾರಿತ ಸೇವೆಗಳು, ಗೇಮಿಂಗ್, ಡಿಜಿಟಲ್ ಶಾಪಿಂಗ್, ಮತ್ತು ಸ್ಮಾರ್ಟ್ ಹೋಂ ಸೌಲಭ್ಯಗಳನ್ನು ಒಳಗೊಂಡಿರುತ್ತದೆ ಎಂದು ಮಾಹಿತಿ ನೀಡಿದರು.

ಉಚಿತ ಕರೆ ಸೌಲಭ್ಯ : ಜಿಯೋ ಫೈಬರ್ ಸಂಪರ್ಕದ ಜತೆಗೆ ಲ್ಯಾಂಡ್ ಲೈನ್ ಫೋನ್ ಸಂಪರ್ಕ ಒದಗಿಸಲಾಗುವುದು. ಇದರಿಂದ ಮಾಡುವ ಸ್ಥಳಿಯ ಹಾಗೂ ದೇಶಿಯ ಕರೆಗಳು ಉಚಿತವಾಗಿರುತ್ತವೆ. ಮಾಸಿಕ ರು. 500 ರಿಚಾರ್ಜ್ ಮಾಡಿಸಿದರೆ ಅಮೆರಿಕಾ ಮತ್ತು ಕೆನಡಾಗೆ ಅನ್ ಲಿಮಿಟೆಡ್ ಕಾಲ್ ಮಾಡಮಾಬಹುದಾಗಿದೆ. ಡಿಜಿಟಲ್ ಬದಲಾವಣೆ ತ್ವರಿತಗೊಳಿಸುವ ದೃಷ್ಟಿಯಿಂದ ಮೈಕ್ರೋಸಾಫ್ಟ್ ಜತೆ ದೀರ್ಘಕಾಲದ ಒಪ್ಪಂದ ಮಾಡಿಕೊಳ್ಳಲಿದೆ. ಸಣ್ಣ ಮತ್ತು ಮಧ್ಯಮ ಎಸ್‌ಎಂಬಿ ಮತ್ತು ದೊಡ್ಡ ಕೈಗಾರಿಕಾ ಗ್ರಾಹಕರಿಗೆ ಸೇವೆ ವಿಸ್ತರಿಸಲು ಜಿಯೋ ಸಂಸ್ಥೆ ಯೋಚಿಸಿದೆ. ದೇಶದಲ್ಲಿ ನ 1,600 ನಗರ ಮತ್ತು ಪಟ್ಟಣಗಳಲ್ಲಿ 2ಕೋಟಿ ಮನೆಗಳು ಮತ್ತು 1.5ಕೋಟಿ ಸಂಸ್ಥೆಗಳಿಗೆ ಸೇವೆ ಒದಗಿಸಲಿದೆ.

ಮೀನುಗಾರರ ಮೇಲೆ ದಾಳಿ

ರಾಮೇಶ್ವರಂ: ಶ್ರೀಲಂಕಾ ಜಲಪ್ರದೇಶದಲ್ಲಿ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಅಲ್ಲಿನ ನೌಕಾಪಡೆ ಹಲವು ಭಾರತೀಯ ಮೀನುಗಾರರ ದೋಣಿಗಳ ಮೇಲೆ ದಾಳಿ ನಡೆಸಿ ಏಳು ಮಂದಿಯನ್ನು ವಶಪಡಿಸಿಕೊಂಡಿದೆ ಎನ್ನಲಾಗಿದೆ.

ಅಂತಾರಾಷ್ಟ್ರೀಯ ಜಲನಿಯಂತ್ರಣ ಗಡಿಯಲ್ಲಿರುವ ಕಚ್ಚತೀವ್ ದ್ವೀಪದ ಬಳಿ ಸೋಮವಾರ ಮಧ್ಯರಾತ್ರಿ ಕಾರ್ಯನಿರತರಾಗಿರುವಾಗ, ತಮ್ಮ ಮೇಲೆ ಶ್ರೀಲಂಕಾ ನೌಕಾಪಡೆ ಏಕಾಏಕಿ ದಾಳಿ ನಡೆಸಿ ಹಲವು ದೋಣಿಗಳಲ್ಲಿದ್ದ ಬಲೆಗಳನ್ನು ಧ್ವಂಸಗೊಳಿಸಿದ್ದರ ಜತೆಗೆ, ಕೂಡಲೇ ಈ ಪ್ರದೇಶವನ್ನು ತೊರೆಯದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿತು ಎಂದು ಸ್ಥಳೀಯ ಮೀನುಗಾರರು ಮಂಗಳವಾರ ಆರೋಪಿಸಿದ್ದಾರೆ.

ಜಲನಿಯಂತ್ರಣ ಗಡಿ ದಾಟಿ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಕಳೆದ ತಿಂಗಳು ಶ್ರೀಲಂಕಾ ನೌಕಾಪಡೆಯು 24 ಭಾರತೀಯ ಮೀನುಗಾರರನ್ನು ಬಂಧಿಸಿ, ಐದು ದೋಣಿಗಳನ್ನು ವಶಪಡಿಸಿಕೊಂಡಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

ರಜನಿ ಮತ್ತೊಮ್ಮೆ ಮಹಾಭಾರತ ಓದಲಿ

ಚೆನ್ನೈ: ಸೂಪರ್‌ಸ್ಟಾರ್ ರಜನಿಕಾಂತ್ ಅವರು ಮಹಾಭಾರತವನ್ನು ಸಂಪೂರ್ಣ ಓದಿಕೊಂಡರೆ ಒಳಿತು ಎಂದು ತಮಿಳುನಾಡು ರಾಜ್ಯ ಕಾಂಗ್ರೆಸ್ ನಾಯಕ ಕೆ.ಎಸ್. ಅಳಗಿರಿ ಸಲಹೆ ನೀಡಿದ್ದಾರೆ.

ಭಾನುವಾರ ಚೆನ್ನೈನಲ್ಲಿ ನಡೆದ ಉಪರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರ ಪುಸ್ತಕವೊಂದರ ಬಿಡುಗಡೆಯ ಸಮಾರಂಭದಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಅವರೊಂದಿಗೆ ಪಾಲ್ಗೊಂಡಿದ್ದ ರಜನಿ, ಮೋದಿ-ಶಾ ಜೋಡಿಯನ್ನು ಕೃಷ್ಣಾರ್ಜುನರಿಗೆ ಹೋಲಿಸಿ ಪ್ರಶಂಸೆಯ ಮಳೆ ಸುರಿಸಿದ್ದಕ್ಕೆ ಅಳಗಿರಿಯವರಿಂದ ಅಸಮಾಧಾನ ಹೊಮ್ಮಿದೆ.

ಈ ಕುರಿತು ಅಳಗಿರಿ ಮಾತನಾಡುತ್ತ, 'ಸಂವಿಧಾನದ 370ನೇ ವಿಧಿ ರದ್ದತಿ ಹಾಗೂ ಕಾಶ್ಮೀರ ವಿಭಜನೆಯ ವಿಷಯದಲ್ಲಿ ರಜನಿಕಾಂತ್ ಬಿಜೆಪಿಯನ್ನು ಬೆಂಬಲಿಸಿರುವುದು ಅಚ್ಚರಿಗೊಳಿಸಿದೆ; ಈಶಾನ್ಯ ರಾಜ್ಯಗಳ ಮಾದರಿಯಂತೆ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿತ್ತು. ಹೀಗಿರುವಾಗ ಕಾಶ್ಮೀರವನ್ನಷ್ಟೇ ಏಕೆ ವಿಭಜಿಸಬೇಕು?' ಎಂದು ಪ್ರಶ್ನಿಸಿದ್ದಾರೆ. ಕಾಶ್ಮೀರದಲ್ಲಿ ಮುಸ್ಲಿಮರ ಬಾಹುಳ್ಯವಿದೆಯೆಂಬ ಕಾರಣಕ್ಕೆ 370ನೇ ವಿಧಿಯನ್ನು ರದ್ದುಮಾಡಲಾಗಿದೆ. ರಜನಿಕಾಂತ್ ಅವರ ಹೇಳಿಕೆ, ಕಾಶ್ಮೀರಕ್ಕೆ ಒಂದು ನ್ಯಾಯ, ಉಳಿದ ರಾಜ್ಯಗಳಿಗೆ ಒಂದು ನ್ಯಾಯ' ಎಂಬ ವಾದಕ್ಕೆ ಪುಷ್ಟಿನೀಡುತ್ತದೆ. ಹೀಗಿರುವಾಗ, ಕೋಟ್ಯಂತರ ಜನರ ಹಕ್ಕುಗಳನ್ನು ಮೊಟಕುಗೊಳಿಸಿದ ಮೋದಿ-ಶಾ ಅವರನ್ನು ಕೃಷ್ಣಾರ್ಜುನರೆಂದು ಬಣ್ಣಿಸುವುದು ತರವಲ್ಲ, ರಜನಿಕಾಂತ್ ಮತ್ತೊಮ್ಮೆ ಮಹಾಭಾರತವನ್ನು ಸಂಪೂರ್ಣ ಓದಿಕೊಂಡರೆ ಒಳಿತು' ಎಂದು ಅಳಗಿರಿ ಟೀಕಿಸಿದ್ದಾರೆ.

ನಮ್ಮ ಬಾಂಧವ್ಯ ಮಹತ್ವದ್ದು: ಜೈಶಂಕರ್

ಬೀಜಿಂಗ್: ಭಾರತ-ಚೀನಾ ಸಂಬಂಧಗಳು ಕೇವಲ ದ್ವಿಪಕ್ಷಿಯವಾಗಿರದೆ ಜಾಗತಿಕ ಆಯಾಮವನ್ನೂ ಪಡೆದುಕೊಂಡಿದ್ದು, ಉಭಯ ದೇಶಗಳು ಸಂಬಂಧಗಳ ದಿಕ್ಕಿನ ಬಗ್ಗೆ ವ್ಯೂಹಾತ್ಮಕ ಕಾರ್ಯತಂತ್ರದ ದೃಷ್ಟಿಕೋನವನ್ನು ಹೊಂದಬೇಕಾದ ಅಗತ್ಯವಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಚೀನಾದ ಸರಕಾರಿ ಸ್ವಾಮ್ಯದ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡುತ್ತಿದ್ದ ಅವರು, 'ಎರಡು ಅತಿದೊಡ್ಡ ಮತ್ತು ಅಭಿವೃದ್ಧಿಶೀಲ ದೇಶಗಳಾದ ಭಾರತ-ಚೀನಾ ನಡುವಿನ ಸಹಕಾರ ವಿಶ್ವಕ್ಕೆ ಬಹಳ ಮಹತ್ವದ್ದಾಗಿದೆ. ವಿಶ್ವಶಾಂತಿ, ಸ್ಥಿರತೆ ಮತ್ತು ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುವಂತಾಗಲು ಉಭಯ ದೇಶಗಳು ಸಂವಹನ-ಸಮನ್ವಯತೆಯನ್ನು ಹೆಚ್ಚಿಸಿಕೊಳ್ಳುವ ಅಗತ್ಯವಿದೆ' ಎಂದರು. 2009ರಿಂದ 2013ರವರೆಗಿನ ಸುದೀರ್ಘ ಅವಧಿವರೆಗೆ ಚೀನಾ ರಾಯಭಾರಿಯಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಹೊಂದಿರುವ ಜೈಶಂಕರ್, ಉಭಯ ದೇಶಗಳು ಕಾಳಜಿಯ ವಿಷಯಗಳನ್ನು ಪರಸ್ಪರ ಬಗೆಹರಿಸಿಕೊಳ್ಳಬೇಕಾದ ಮತ್ತು ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಆದ್ಯತೆ ನೀಡಬೇಕಾದ ಅಗತ್ಯವಿದೆ ಎಂದೂ ಈ ವೇಳೆ ಪ್ರತಿಪಾದಿಸಿದರು. ಅಷ್ಟೇ ಅಲ್ಲ, ವಿದೇಶಾಂಗ ವ್ಯವಹಾರಗಳ ಸಚಿವರಾದ ನಂತರ ತಮ್ಮ ಹೊಸ ಪಾತ್ರದ ಆರಂಭದಲ್ಲಿ ಚೀನಾಕ್ಕೆ ಭೇಟಿ ನೀಡಿರುವುದು ಸಂತಸವಾಗಿದೆ ಎಂದೂ ಹೇಳಿದರು.

ಜಿಮ್ ಕಾರ್ಬೆಟ್‌ನಲ್ಲಿ ಮೋದಿ ನೆನಪಿನ ದೋಣಿಯ ಪಯಣ

- ಡಿಸ್ಕವರಿ ಚಾನಲ್‌ನ 'ಮ್ಯಾನ್ ವರ್ಸಸ್ ವೈಲ್ಡ್' ಕಾರ್ಯಕ್ರಮ ನಿರೂಪಕ ಬೇರ್ ಗ್ರಿಲ್ಸ್ ಜತೆ ಹೆಜ್ಜೆ ಹಾಕಿದ ಮೋದಿ ಅವರು ಪ್ರಕೃತಿಯ ಜತೆಗಿನ ತಮ್ಮ ಅನುಭವವನ್ನು ಬಿಚ್ಚಿಟ್ಟರು. ನಿಸರ್ಗವನ್ನು ನಾವು ಪ್ರೀತಿಸಬೇಕು. ಪ್ರಕೃತಿಯನ್ನು ಬಹಳ ಹತ್ತಿರದಲ್ಲಿ ನೋಡಿ ಅದರ ಸೊಬಗನ್ನು ಸವಿಯ ಬೇಕು ಎಂದು ಹೇಳುತ್ತಾ, ಜಿಮ್ಮ ಕಾರ್ಬೆಟ್ ಅಭಯಾರಣ್ಯದ ಸೊಬಗನ್ನು ತೆರೆದಿಟ್ಟರು. ಜಿಮ್ ಕಾರ್ಬೆಟ್ ರಾಷ್ಟ್ರಿಯ ಉದ್ಯಾನದಲ್ಲಿ ನಿಜವಾದ ಭಾರತದ ಸೊಬಗು ಇರುವುದು ವೈವಿಧ್ಯದ ಏಕತೆಯಲ್ಲಿ ಎಂದು ಗುಣಗಾನ ಮಾಡಿದರು.
- ತನ್ನ ಬಾಲ್ಯ ದಿನಗಳನ್ನು ಮೋದಿ ಬೇರ್ ನೊಂದಿಗೆ ಹಂಚಿಕೊಂಡರು. ಗುಜರಾತ್ ವಡ್‌ನಗರದಲ್ಲಿ ಜನನ, ಸರಕಾರಿ ಶಾಲೆಯಲ್ಲಿ ವ್ಯಾಸಂಗ, ಸಾಬೂನು ಖರೀದಿಸಲು ಹಣವಿಲ್ಲದ ಕಾರಣ ಮಣ್ಣನ್ನೇ ನುಣುಪುಗೊಳಿಸಿ ಮೈಗೆ ಬಳೆದು ಸ್ನಾನ ಮಾಡುತ್ತಿದ್ದೆವು. ನಮ್ಮ ಮನೆಯಲ್ಲಿ ಇಸ್ತ್ರಿ ಪೆಟ್ಟಿಗೆ ಇರಲಿಲ್ಲ, ಹಾಗಾಗಿ ತಾಮ್ರದ ಪಾತ್ರೆಯೊಂದರಲ್ಲಿ ಬಿಸಿ ಇದ್ದಲು ಹಾಕಿ ನಾನು ನನ್ನ ಶರ್ಟ್ ಇಸ್ತ್ರಿ ಮಾಡುತ್ತಿದ್ದೆ. ಅಲ್ಲದೇ ರೈಲ್ವೆ ನಿಲ್ದಾಣದಲ್ಲಿ ಚಹಾ ಮಾರಿದ ಕಥೆಯನ್ನೂ ಅವರು ಈ ವೇಳೆ ಗ್ರಿಲ್ಸ್‌ಗೆ ಹೇಳಿದರು. ಈ ವೇಳೆ ನಡೆದು ಹೋಗುತ್ತಿದ್ದಾಗ ಆನೆ ಲದ್ದಿಯನ್ನು ಎತ್ತಿ ಮೂಸಿ ನೋಡಿ, ಈಗಷ್ಟೇ ಆನೆ ಹಾದು ಹೋಗಿದೆ ಎಂದು ಹೇಳಿದಾಗ ಮೋದಿ ಕೂಡ ಅದನ್ನು ಮೂಸಿ ನೋಡಿದರು.
- 17ರ ಹರೆಯದಲ್ಲಿ ಮನೆ ಬಿಟ್ಟು ಹಿಮಾಲಯಕ್ಕೆ ಹೋಗಿದ್ದೆ. ಹೀಗಾಗಿ ಆತ್ಮರಕ್ಷಣೆ ತಿಳಿದಿದೆ. ನಾನು ನನ್ನ ಜೀವನದ ಬಗ್ಗೆ ನಿರ್ಧಾರವನ್ನು ಕೈಗೊಳ್ಳಬೇಕೆಂದಿದ್ದೆ. ನಾನು ಜಗತ್ತನ್ನು ಅರ್ಥ ಮಾಡಿಕೊಳ್ಳಬೇಕಿತ್ತು. ಧಾರ್ಮಿಕ ಜಗತ್ತನ್ನು ನೋಡಲು ಬಯಸಿದ್ದೆ. ಅದಕ್ಕಾಗಿ ಹಿಮಾಲಯಕ್ಕೆ ಹೋದೆ. ಅದೊಂದು ವಿಶೇಷ ಅನುಭವವಾಗಿತ್ತು. ಹುಲಿಯಿಂದ ರಕ್ಷಣೆಗೆ ಮೋದಿ ಹಾಗೂ ಬೇರ್ ಭರ್ಜಿಯನ್ನೂ ತಯಾರಿಸಿದರು. ಭರ್ಜಿಯನ್ನು ಇರಿದು ಪ್ರಾಣಿಯನ್ನು ಕೊಲ್ಲುವುದು ನನ್ನ ಸಂಸ್ಕಾರವಲ್ಲ. ಆದರೆ ನೀವು ಹೇಳಿದ್ದೀರಿ ಎಂದ ಮಾತ್ರಕ್ಕೆ ನಾನು ಹಿಡಿದುಕೊಳ್ಳುತ್ತೇನೆ ಎಂದು ಬೇರ್‌ಗೆ ಮೋದಿ ಹೇಳಿದರು.
- ಪ್ರಧಾನಿಯಾಗುವ ಕನಸು ಇತ್ತಾ? ಎಂದು ಬೇರ್ ಗ್ರಿಲ್ಸ್ ಕೇಳಿದಾಗ ದೇಶದ ಅಭಿವೃದ್ಧಿ ನನ್ನ ಕನಸು ಅದನ್ನು ನನಸಾಗಿಸಲು ನಾನು ಈಗಲೂ ಶ್ರಮಿಸುತ್ತಿರುವೆ. ನಾನು ಯಾರು ಎಂಬುದು ಮುಖ್ಯ ಅಲ್ಲ, ಸಿಎಂ ಮತ್ತು ಪ್ರಧಾನಿಯಾಗಿ ನಾನು ಏನು ಮಾಡುತ್ತೇನೆ ಎಂಬುದು ಮುಖ್ಯ. ಆದರೆ ನನ್ನ ಮಂತ್ರ ಅಭಿವೃದ್ಧಿ. ನನ್ನ ಕೆಲಸದಲ್ಲಿ ತೃಪ್ತಿ ಕಂಡುಕೊಂಡಿದ್ದೇನೆ. ಈ ಸಮಯವನ್ನು ನಾನು ರಜೆ ಎಂದುಕೊಂಡರೆ, 18 ವರ್ಷಗಳ ನಂತರ ಇದೇ ಮೊದಲ ಬಾರಿ ನಾನು ರಜೆ ತೆಗೆದುಕೊಂಡಿದ್ದು ಎಂದಿದ್ದರು ಪ್ರಧಾನಿ.
- ಬಳ್ಳಿಗಳಿಂದ ಮಾಡಿಟ್ಟಿದ್ದ ತೆಪ್ಪವನ್ನು ಇಬ್ಬರೂ ಸೇರಿ ಎಳೆದು ನದಿಗೆ ಬಿಟ್ಟರು. ನಂತರ ಅದರಲ್ಲಿ ಇಬ್ಬರೂ ಕುಳಿತುಕೊಂಡು ನದಿಯ ಇನ್ನೊಂದು ಬದಿಗೆ ತೆರಳಿದರು. ಈ ಮಧ್ಯೆ, ಮೋದಿ ಬೇವಿನ ಎಲೆಗಳನ್ನು ಮೂಸಿ ಇದು ಭಾರತದ ಸೊಬಗು ಎಂದು ವರ್ಣಿಸಿದರು. ಇಂಥ ತೆಪ್ಪದಲ್ಲಿ ನದಿಯನ್ನು ದಾಟಿದ ಪ್ರಧಾನಿ ಇತಿಹಾಸದಲ್ಲಿ ನೀವೊಬ್ಬರೇ ಇರಬೇಕು ಎಂದು ಬೇರ್ ಹೇಳಿದ್ದಕ್ಕೆ, ಇದೇನೂ ಹೊಸದು ಎನಿಸುವುದಿಲ್ಲ, ನಾನು ಈ ರೀತಿಯೇ ಬೆಳೆದಿದ್ದೇನೆ ಎಂದು ಮೋದಿ ಹೇಳಿದರು. ಭಾರತದ ಜನರು ದೇಶವನ್ನು ಸ್ವಚ್ಛ ಮಾಡಬಲ್ಲರು. ದೈಹಿಕ ಸ್ವಚ್ಛತೆ ಭಾರತೀಯ ಸಂಪ್ರದಾಯದ ಭಾಗವಾಗಿದೆ. ನಾವು ಸಾಮಾಜಿಕ ಸ್ವಚ್ಛತೆಯ ಪರಿಪಾಠವನ್ನು ಬೆಳೆಸಿಕೊಳ್ಳಬೇಕಿದೆ. ಮಹಾತ್ಮ ಗಾಂಧಿಯವರು ಈ ಬಗ್ಗೆ ಹೆಚ್ಚಿನ ಕಾರ್ಯ ಮಾಡಿದ್ದು ಇದರಲ್ಲಿ ನಮಗೆ ಹೆಚ್ಚಿನ ಫಲ ಸಿಕ್ಕಿದೆ. ಈ ವಿಷಯದಲ್ಲಿ ಭಾರತ ಅತಿ ಶೀಘ್ರದಲ್ಲಿಯೇ ಗೆಲುವು ಸಾಧಿಸಲಿದೆ ಎಂದು ನನ್ನ ನಂಬಿಕೆ ಎಂದರು.
- ಬೇರ್ ಗ್ರಿಲ್ಸ್ ಮೊಸಳೆ ಮರಿಗಳ ಬಗ್ಗೆ ಕೇಳಿದಾಗ ಮೋದಿಯವರ ಉತ್ತರ ಹೀಗಿತ್ತು–ಒಂದು ದಿನ ಸ್ನಾನ ಮಾಡುತ್ತಿದ್ದಾಗ ಮೊಸಳೆಯ ಮರಿ ಕಂಡು, ಅದನ್ನು ಹಿಡಿದುಕೊಂಡು ಮನೆಗೆ ಬಂದಿದ್ದೆ. ಆದರೆ ಹಾಗೆ ಮಾಡುವುದು ಪಾಪ, ಅದಕ್ಕೂ ಜೀವವಿರುತ್ತದೆ ಎಂದು ಅಮ್ಮ ಹೇಳಿದ್ದರಿಂದ ಅದನ್ನು ವಾಪಸ್ ಕೊಳದಲ್ಲಿ ಬಿಟ್ಟೆ ಎಂದು ಮೋದಿ ಹೇಳಿದರು. ನಾವು ನಿಸರ್ಗಕ್ಕೆ ಹೆದರಬಾರದು ಎಂದರು.

ಮ್ಯಾನ್ ವರ್ಸಸ್ ವೈಲ್ಡ್ ಅನುಭವ

ನಾನು ನಿಜವಾಗಿಯೂ ಈ ದಿನವನ್ನು ಆಸ್ವಾದಿಸಿದೆ. ಹಿಮಾಲಯದ ದಿನಗಳಿಂದ ಹಿಡಿದು ಎಲ್ಲ ನೆನಪುಗಳು ಮರುಕಳಿಸಿದವು. ನರ್ಮದಾ ನದಿ ತೀರದಲ್ಲಿ ನಾನು ಕಳೆದ ದಿನಗಳು ನೆನಪಿಗೆ ಬಂದವು. ಅದು ನದಿ, ಕೆರೆ ಅಥವಾ ಜಲಪಾತವೇ ಆಗಿರಲಿ. ನನ್ನ ಯೌವನ ಕಾಲದಲ್ಲಿ ಧ್ಯಾನವನ್ನು ಅಭ್ಯಸಿಸುತ್ತಿದ್ದೆ. ಈ ಜಾಗಗಳೆಲ್ಲವೂ ನನ್ನ ಜೀವನದಲ್ಲಿ ಮಹತ್ತರವಾದುದಾಗಿವೆ. ಹಿಂದೆ ಅನುಭವಿಸಿದ್ದ ಅದೇ ಖುಷಿಯನ್ನು ನಾನೀಗ ಅನುಭವಿಸುವಂತಾಯಿತು. ಇದೊಂದು ಹೃದಯಸ್ಪರ್ಶಿ ಅನುಭವ ಎಂದು ಮೋದಿ ಹೇಳಿದ್ದಾರೆ.

180 ರಾಷ್ಟ್ರಗಳಲ್ಲಿ ಬಿತ್ತರ

ಈ ವಿಶೇಷ ಕಾರ್ಯಕ್ರಮವು ಡಿಸ್ಕವರಿಯ 12 ಚಾನಲ್‌ಗಳಲ್ಲಿ 180 ದೇಶಗಳಲ್ಲಿ ಬಿತ್ತರವಾಯಿತು. 'ಮ್ಯಾನ್ ವರ್ಸಸ್ ವೈಲ್ಡ್' ಪ್ರಚಾರದ ದೃಶ್ಯವನ್ನು (ಟೀಸರ್) ಕೇಂದ್ರ ಪ್ರವಾಸೋದ್ಯಮ ಇಲಾಖೆಯು 'ಇನ್‌ಕ್ರೆಡಿಬಲ್ ಇಂಡಿಯಾ' ವೆಬ್‌ಸೈಟ್‌ನಲ್ಲಿ ಹಾಕಿತ್ತು. ಪ್ರಧಾನಿ ಮೋದಿ ಪ್ರವಾಸೋದ್ಯಮದ ಬಹುದೊಡ್ಡ ರಾಯಭಾರಿಯಾಗಿದ್ದು, ಈ ಕಾರ್ಯಕ್ರಮವು ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಪ್ರವಾಸೋದ್ಯಮ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಹೇಳಿದ್ದರು.

ಕನ್ನಡದಲ್ಲೂ ಡಿಸ್ಕವರಿ ಆರಂಭ

'ಮ್ಯಾನ್ ವರ್ಸಸ್ ವೈಲ್ಡ್' ಕಾರ್ಯಕ್ರಮವು ಇಂಗ್ಲಿಷ್, ಹಿಂದಿ, ಕನ್ನಡ, ಮರಾಠಿ, ಮಲಯಾಳಂ, ತೆಲುಗು, ತಮಿಳು, ಬೆಂಗಾಲಿ ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ. ಅಮೆರಿಕದಲ್ಲಿ 8 ಭಾಷೆಗಳಲ್ಲಿ ಪ್ರಸಾರವಾಗಲಿದೆ.

ಜ್ಞಾನವಾಹಿನಿಗಳು ಕನ್ನಡದಲ್ಲಿ ಬರಬೇಕು ಎಂಬ ಒತ್ತಾಯದ ನಡುವೆಯೇ ಪ್ರಸಿದ್ಧ ಡಿಸ್ಕವರಿ ವಾಹಿನಿ ಸೋಮವಾರದಿಂದ ಕನ್ನಡ ಪ್ರಸಾರ ಆರಂಭಿಸಿರುವುದಕ್ಕೆ ಸ್ವಾಗತ ವ್ಯಕ್ತವಾಗಿದೆ. ಹಿಂದಿಯ ಒಂದು ಶಬ್ದವೂ ಗೊತ್ತಿಲ್ಲದ ಬಿಯರ್ ಗ್ರಿಲ್ಸ್, ಮೋದಿಯವರ ಮಾತುಗಳನ್ನು ಹೇಗೆ ಅರ್ಥಮಾಡಿಕೊಂಡರು ಎಂದು ಹೆಚ್ಚು ಮಂದಿ ಅಚ್ಚರಿ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದಾರೆ. ದೇಶದ ಅನೇಕ ಹಳ್ಳಿಗಳಲ್ಲಿ, ಶಾಲೆಗಳು ಮತ್ತು ಪಂಚಾಯತ್ ಕಚೇರಿಗಳಲ್ಲಿ ಬಿಜೆಪಿ ಮುಖಂಡರು ಟಿವಿ ಹಾಕಿ ಮೋದಿ ಅವರ ಕಾರ್ಯಕ್ರಮವನ್ನು ಜನರಿಗೆ ತೋರಿಸಿದ್ದರು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers TVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:4, Issue:222